# ನಾಯಿ ಸಾಕೋದು ಸುಲಭವಲ್ಲ...

■ ಅನಿತಾ ಈ. ಹೊಸಕೋಟೆ

ಯಾರ ಬಳಿಯಾದರೂ ಪುಟ್ಟ ನಾಯಿ ಮರಿ ಕಂಡರೆ ಒಮ್ಮೆ ಎತ್ತಿ ಮುದ್ದಾಡುವ ಮನಸ್ಸಾಗುತ್ತೆ. ಪ್ರಾಣಿಗಳನ್ನು ಇಷ್ಟಪಡುವವರು ನಾಯಿ ನೋಡಿದರೆ ಸಾಕು ಅದನ್ನು ಮನೆಗೆ ತೆಗೆದುಕೊಂಡು ಹೋಗುವಷ್ಟು ಉತ್ಸುಕರಾಗಿಬಿಡುತ್ತಾರೆ. ರಕ್ಷಿತ್ ಶೆಟ್ಟಿ ನಟನೆಯ ‘ಚಾರ್ಲಿ’ ಸಿನಿಮಾ ನೋಡಿದ ಮೇಲಂತೂ ತುಂಬಾ ಜನರು ಅದರ ಗುಂಗಿನಲ್ಲೇ ಮನೆಗೆ ನಾಯಿ ಮರಿಗಳನ್ನು ತರುತ್ತಿದ್ದಾರೆ.

ನಾಯಿ ಸಾಕುವುದು ಬಾಯಿಯಲ್ಲಿ ಹೇಳಿದಷ್ಟು ಸುಲಭವಲ್ಲ. ನಾಯಿಯನ್ನು ಸಾಕಲು ಮನೆಗೆ ತರುವ ಮುನ್ನ ಕೆಲವೊಂದು ಪ್ರಮುಖ ಅಂಶಗಳನ್ನು ಅರಿತಿರಬೇಕು.

## ಲೈಫ್ ಟೈಮ್ ಕಮಿಟ್‌ಮೆಂಟ್

ನಾಯಿಗಳು ಸಾಮಾನ್ಯವಾಗಿ 12ರಿಂದ 13 ವರ್ಷಗಳು ಬದುಕುತ್ತವೆ. ಕೆಲವೊಂದು 18 ವರ್ಷಗಳೂ ಬದುಕುತ್ತವೆ. ನಾಯಿಯನ್ನು ಸಾಕಲು ನಾವು ಎಷ್ಟು ಸಮರ್ಥರು ಎಂದು ಮೊದಲು ಅರಿತುಕೊಳ್ಳಬೇಕು. ನಮ್ಮ ಅಮೂಲ್ಯ ಸಮಯವನ್ನು ಅವುಗಳಿಗಾಗಿ ವ್ಯಯಿಸಲೇಬೇಕಾಗುತ್ತದೆ. ನಾವು ಸದಾ ಅವುಗಳೊಂದಿಗಿದ್ದು, ಆರೈಕೆ ಮಾಡಬೇಕಾಗುತ್ತದೆ.

ನಾಯಿಗಳ ಆರೈಕೆ ಹೇಗೆ ಮಾಡಬೇಕು? ಯಾವ ರೀತಿಯ ಆಹಾರ ಕೊಡಬೇಕು? ಎಷ್ಟು ದಿನಕ್ಕೊಮ್ಮೆ ಸ್ನಾನ ಮಾಡಿಸಬೇಕು? ಅವುಗಳು ಆರೋಗ್ಯದಿಂದಿರಲು ಯಾವಾಗ ಹಾಗೂ ಯಾವ ಔಷಧಿಗಳನ್ನು ಕೊಡಬೇಕು? ಈ ಮಾಹಿತಿಗಳನ್ನು ತಿಳಿದುಕೊಂಡಿರಬೇಕು. ನಾಯಿ ಮರಿ ಇರುವಾಗಲೇ ಅದಕ್ಕೆ ಶೌಚದ ತರಬೇತಿ ನೀಡಲಾರಂಭಿಸಬೇಕು. ಅದು ಮನೆಯೊಳಗೆ ಮಲ–ಮೂತ್ರ ಮಾಡದಂತೆ ಅಭ್ಯಾಸ ಮಾಡಿಸಬೇಕು.

ಮರಿಯಾಗಿದ್ದಾಗ ನಿತ್ಯ 3–4 ಸಲ ಆಹಾರ ಕೊಡಬೇಕಾಗುತ್ತದೆ. ನಿತ್ಯ ವ್ಯಾಯಾಮ, ವಾಕಿಂಗ್ ಮಾಡಿಸಲೇಬೇಕು. ಮನೆಯ ವಾತಾವರಣ ಹಾಗೂ ಸದಸ್ಯರ ಜೊತೆ ಹೊಂದಿಕೊಳ್ಳಲು ಅಭ್ಯಾಸ ಮಾಡಿಸಬೇಕು. ಆರಂಭದಲ್ಲಿ ಅದಕ್ಕೆ ಅಗತ್ಯವಿರುವ ಸಮಯ ಕೊಡದಿದ್ದರೆ, ಬೆಳವಣಿಗೆ ಹಾಗೂ ವರ್ತನೆಯ ಮೇಲೆ ಪರಿಣಾಮ ಬೀರಬಹುದು.

## ಸ್ವಚ್ಛತೆ ಬಹು ಮುಖ್ಯ

ಸೇವೆ ಸಲ್ಲಿಸುವ ನಾಯಿ ಹಾಸ್ಟೆಲ್‌ಗಳು ನೆರವಿಗೆ ಬರುತ್ತವೆ.

## ಜಿಲ್ಲಾ ಕೇಂದ್ರಗಳಲ್ಲೂ ಬೋರ್ಡಿಂಗ್!

ಶ್ವಾನಗಳ ವಸತಿ ನಿಲಯದಲ್ಲಿ ಸಾಮಾನ್ಯವಾಗಿ ಎಲ್ಲ ಜಾತಿಯ ನಾಯಿಗಳನ್ನೂ ನೋಡಿಕೊಳ್ಳಲಾಗುತ್ತದೆ. ನಾಯಿಗಳಿಗಾಗಿ ಡೇ ಕೇರ್ ಕೂಡ ಇದ್ದು ಇಲ್ಲಿ ಒಂದು ದಿನದ ಮಟ್ಟಿಗೆ ಹಗಲು ಹೊತ್ತಿನಲ್ಲಿ ನಾಯಿಗಳನ್ನು ಉಪಚರಿಸಲಾಗುತ್ತದೆ. ಅಷ್ಟೇ ಅಲ್ಲ, ಅನಾರೋಗ್ಯದ ನಿಮಿತ್ತ ಆಸ್ಪತ್ರೆಗೆ ಹೋಗಬೇಕಾದ ಸಂದರ್ಭಗಳಲ್ಲಿ ಅರ್ಧ ದಿನದ ಮಟ್ಟಿಗೂ ನಾಯಿಯನ್ನು ಕಾಳಜಿ ಮಾಡುವ ಹೋಂ ಸ್ಟೇಗಳು ಬೆಂಗಳೂರು ನಗರದಲ್ಲಿವೆ. ನಾಯಿ ಸಾಕುವ ಟ್ರೆಂಡ್ ಮೈಸೂರು, ಚಿತ್ರದುರ್ಗ, ಹುಬ್ಬಳ್ಳಿ ಮುಂತಾದ ಜಿಲ್ಲಾ ಕೇಂದ್ರಗಳಲ್ಲೂ ಇದ್ದು, ಇಲ್ಲೂ ಡಾಗ್ ಬೋರ್ಡಿಂಗ್ ನಡೆಸುವವರಿದ್ದಾರೆ.

ಹಾಸ್ಟೆಲ್‌ಗೆ ಸೇರಿಸುವ ಮುನ್ನ ವಸತಿ ನಿಲಯದ ನಿರ್ವಾಹಕರು ನಾಯಿಯ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಳ್ಳುತ್ತಾರೆ. ಮುಖ್ಯವಾಗಿ ರೇಬಿಸ್ ಹಾಗೂ ಕೆನಲ್ ಕಾಫ್ ವ್ಯಾಕ್ಸೀನ್ ಆಗಿರುವುದರ ಬಗ್ಗೆ ಖಚಿತಪಡಿಸಿಕೊಳ್ಳುತ್ತಾರೆ. ಇತರ ನಾಯಿಗಳ ಕಾಳಜಿಯ ದೃಷ್ಟಿಯಿಂದ ಈ ಮುನ್ನೆಚ್ಚರಿಕೆ ತೆಗೆದುಕೊಳ್ಳಲಾಗುತ್ತದೆ.

ಉದ್ಯೋಗಿಗಳಿಗೆ, ವಿದ್ಯಾರ್ಥಿಗಳಿಗೆ ಊಟ–ವಸತಿ ನೀಡುವ ‘ಪಿ.ಜಿ.’ಗಳನ್ನು ನಡೆಸಲು ಪರವಾನಗಿ ಪಡೆಯುವಂತೆ, ನಾಯಿ ಬೋರ್ಡಿಂಗ್ ಆರಂಭಿಸಲೂ ಅನುಮತಿ ಅಗತ್ಯ. ಬೆಂಗಳೂರು ಆದರೆ ಬಿಬಿಎಂಪಿ, ಇತರ ನಗರಗಳಾದರೆ ಸ್ಥಳೀಯ ಆಡಳಿತ ಪ್ರಾಧಿಕಾರದಿಂದ ಪರವಾನಗಿ ಪಡೆದುಕೊಳ್ಳಬೇಕು.

ನಾಯಿ ಬೋರ್ಡಿಂಗ್ ಶುರು ಮಾಡಬೇಕಾದರೆ ಪರವಾನಗಿಗಾಗಿ ಕೆಲವು ನಿಯಮಗಳನ್ನು ಪಾಲಿಸಬೇಕು. ಅವುಗಳೆಂದರೆ:



ನೆಚ್ಚಿನ ನಾಯಿಯ ಬರ್ತ್‌ಡೇ ಸಂಭ್ರಮ

- ಎಷ್ಟು ನಾಯಿಗಳನ್ನು ನೋಡಿಕೊಳ್ಳಲಾಗುತ್ತದೆ ಎಂಬ ಬಗ್ಗೆ ಮಾಹಿತಿ ನೀಡಬೇಕು.
- ನಾಯಿ ನೋಡಿಕೊಳ್ಳುವ ಬಗೆಯನ್ನು ಅರಿತಿರಬೇಕು.
- ಪ್ರಶಸ್ತವಾದ ಸ್ಥಳವನ್ನು ರೂಪಿಸಿಕೊಳ್ಳಬೇಕು
- ಆಹಾರ ಹಾಕುವ ಪದ್ಧತಿಯನ್ನು ತಿಳಿದುಕೊಂಡಿರಬೇಕು.

## ರೊಟ್ಟಿ-ಅನ್ನ, ಚಿಕನ್ ಸೂಪ್!

ಸ್ವಭಾವತಃ ನಾಯಿ ಮಾಂಸಾಹಾರಿ. ಆದರೆ ಸಸ್ಯಾಹಾರಿಗಳ ಮನೆಗಳಲ್ಲಿ ನಾಯಿಗಳಿಗೂ ಸಸ್ಯಾಹಾರವೇ! ಹಾಸ್ಟೆಲ್‌ಗಳಲ್ಲಿ, ಮಾಂಸಾಹಾರಿ ನಾಯಿಗಳಿಗೆ ಚಿಕನ್ ಸೂಪ್, ಕರಿದ ಮೀನು ಸಿಗುತ್ತದೆ. ಸಸ್ಯಾಹಾರಿ ನಾಯಿಗೆ ಹಾಲು, ಮೊಸರನ್ನ, ರೊಟ್ಟಿ ಮತ್ತು ಅನ್ನ ಕೊಡಲಾಗುತ್ತದೆ. ನಾಯಿಗಳಿಗೆ ಪ್ಯಾಕ್ಡ್ ಫುಡ್ ಕೊಡುವುದಕ್ಕಿಂತ ಮನೆಯ ಆಹಾರವನ್ನೇ ಅಭ್ಯಾಸ ಮಾಡಿಸಿದರೆ ಉತ್ತಮ. ಹಾಲು, ಚಪಾತಿ, ತುಪ್ಪ ಅನ್ನ, ಹಣ್ಣು ಹಾಗೂ ಬೇಯಿಸಿದ ತರಕಾರಿ ಕೂಡ ನಾಯಿಗಳಿಗೆ ಸೂಕ್ತವಾದ ಆಹಾರ.

‘ಇದು ಹತ್ತು ವರ್ಷಗಳಷ್ಟು ಹಿಂದಿನ ಮಾತು. ನನಗೆ ನಾಯಿ ಎಂದರೆ ಮೊದಲಿನಿಂದಲೂ ಬಹಳ ಪ್ರೀತಿ. ಮನೆಯಲ್ಲಿ ನಾಲ್ಕು ನಾಯಿಗಳನ್ನು ಸಾಕುತ್ತಿದ್ದೆ. ಎಲ್ಲಿಗಾದರೂ ಹೋಗಬೇಕೆಂದರೆ ನಾಯಿಗಳನ್ನು ಸ್ನೇಹಿತರ ಮನೆಯಲ್ಲಿ ಬಿಟ್ಟು ಹೋಗಬೇಕಿತ್ತು. ಪ್ರತಿ ಸಲವೂ ‘ನಾಯಿ